**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 93/2020**

**ಚಾ.ಸಾಃ1, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಅನಂತ ಭಂಡಾರಿ |
| ತಾಯಿ ಹೆಸರು | ಸೀತಾರಾಮ ಭಂಡಾರಿ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ಕೃಷಿ |
| ವಾಸ್ತವ್ಯ | ಅರೆಅಂಗಡಿ, ತಾಲೂಕಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 29-07-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಮ್ಮ ಕುಮಟಂಬದ ಮೂಲ ಮನೆಯು ಕಡತೋಕಾ ಜಡ್ಡಿಗದ್ದೆಯಲ್ಲಿ ಇರುತ್ತದೆ. ಸದರಿ ಮನೆಯಲ್ಲಿ ನನ್ನ ತಾಯಿಯಾದ ಚಾಸಾ-6 ಲಕ್ಷ್ಮೀ ಸೀತಾರಾಮ ಭಂಡಾರಿ ವಾಸ ಮಾಡುತ್ತಾರೆ. ಸದರಿ ಮನೆಯಲ್ಲಿ ಕಳ್ಳತನವಾಗುವ 10 ದಿನ ಮೊದಲು ಕೋವಿಡ್ ಪ್ರಯುಕ್ತ ನನ್ನ ತಾಯಿಯನ್ನು ಅರೆಅಂಗಡಿಯಲ್ಲಿರುವ ನನ್ನ ಮನೆಗೆ ಕರೆತಂದಿದ್ದೆ. ಕಡತೋಕಾದ ಜಡ್ಡಿಗದ್ದೆಯ ಮನೆಯನ್ನು ಕೆಲಸ ಮಾಡುತ್ತಿದ್ದ ಚಾಸಾ-7 ಜಯಾ ಯಂಕು ಗೌಡರವರು ನೋಡಿಕೊಳ್ಳುತ್ತಿದ್ದರು.

ದಿನಾಂಕ 17-07-2020 ರಂದು ಬೆಳಿಗ್ಗೆ 07-15 ರ ಸಮಯದಲ್ಲಿ ಚಾಸಾ-7 ರವರು ನನ್ನ ಮೊಬೈಲಿಗೆ ಕರೆ ಮಾಡಿ ಕಡತೋಕಾದ ಜಡ್ಡಿಗದ್ದೆಯ ಬಾಗಿಲು ತೆರೆದಿರುವಾಗಿ ತಿಳಿಸಿರುತ್ತಾರೆ. ತಕ್ಷಣ ನಾನು ಮೋಟಾರು ಸೈಕಲ್ ಮೇಲೆ ಅಲ್ಲಿಗೆ ಹೋಗಿ ನೋಡಲಾಗಿ ಮನೆಯ ಬಾಗಿಲು ತೆರೆದಿದ್ದು ಅದಕ್ಕೆ ಹಾಕಿದ್ದ ಬೀಗವು ಹಾಗೇಯೇ ಇದ್ದು ಬಾಗಿಲಿನ ಚಿಲಕವನ್ನು ಯಾರೋ ಕಬ್ಬಿಣದ ರಾಡಿನಿಂದ ಮುರಿದಿದ್ದರು. ಮನೆಯ ಒಳಗಿನ ದೇವರ ಕೋಣೆಯಲ್ಲಿ 3 ಕಪಾಟುಗಳಿದ್ದು 2 ಕಪಾಟುಗಳನ್ನು ತೆರೆಯಲಾಗಿತ್ತು. ಒಂದು ಕಪಾಟಿನಲ್ಲಿ ಹೆಂಗಸರು ಬಳಸುವ ಕೈ ಉಂಗುರ ಮತ್ತು ದೇವರಿಗೆ ಹಾಕುವ ಒಂದು ಮೂಗುತಿ ಕಳ್ಳತನ ಆಗಿದ್ದವು. ಕೂಡಲೇ ನಾನು ಹೊನ್ನಾವರ ಪೋಲೀಸ್ ಠಾಣೆಗೆ ಕರೆ ಮಾಡಿ ವಿಷಯವನ್ನು ತಿಳಿಸಿರುತ್ತೇನೆ. ತಕ್ಷಣ ಪೋಲಿಸರು ಮನೆಗೆ ಬಂದಾಗ ಅವರಿಗೆ ನಾನು ಅಲ್ಲಿನ ಸ್ಥಿತಿಗತಿಗಳನ್ನು ತೋರಿಸಿರುತ್ತೇನೆ.

ಪೋಲಿಸರು ಮನೆಯ ಒಳಗೆ ಬಂದು ಮತ್ತೇನು ಕಳ್ಳತನ ಆಗಿದೆ ಎಂದು ಕೇಳಿದಾಗ ನಾವು ಕಪಾಟಿನ ಒಳಗೆ ಒಂದು ಸೀರೆಯ ಮಧ್ಯದಲ್ಲಿ ಇಟ್ಟಿದ್ದ ರೂ. 40,000-00 ಹಣ ಕಳ್ಳತನವಾಗದೇ ಅಲ್ಲಿಯೇ ಇತ್ತು. ಕಳ್ಳತನದ ಬಗ್ಗೆ ನಾನು ಪೋಲಿಸರಿಗೆ ಪಿರ್ಯಾದು ನೀಡಿದ್ದು ಅದನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದು ಅದನ್ನು ನಿಪಿ-1 ಮತ್ತು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮಾರನೇ ದಿನ ಅಂದರೆ ದಿನಾಂಕ 18-07-2020 ರಂದು ಪೋಲಿಸರು ಸ್ಥಳಕ್ಕೆ ಬಂದಿದ್ದರು. ಅವರಿಗೆ ಬಾಗಿಲು ಒಡೆದಿರುವುದು, ಕಳ್ಳತನವಾಗಿರುವುದು ಮತ್ತು ಮನೆಯನ್ನು ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ-2 ಸೀತಾರಾಮ ನಾರಾಯಣ ಭಂಡಾರಿ, ಚಾಸಾ-3 ತಿಮ್ಮು ಮಣಿ ಗೌಡ, ನನ್ನ ತಾಯಿ ಮತ್ತು ಪೋಲಿಸರು ಹಾಜರಿದ್ದರು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಪಿ-2 ಮತ್ತು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ 2 ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದ್ದರಿಂದ ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

ದಿನಾಂಕ 04-08-2020 ರಂದು ಪೋಲಿಸರು ನಮ್ಮ ಮನೆಗೆ ಇಲಾಖಾ ಜೀಪಿನಲ್ಲಿ ಸಜ್ಜದ ಮತ್ತು ಮುಬಾಶೀರ್ ಎನ್ನುವ ಇಬ್ಬರು ವ್ಯಕ್ತಿಗಳನ್ನು ಕರೆತಂದಿದ್ದರು. ಅವರನ್ನು ನಾನು ಯಾವ ರೀತಿ ಕಳ್ಳತನ ಮಾಡಿದ್ದೀರಿ ಎಂದು ಕೇಳಲಾಗಿ ಅವರು ಬಾಗಿಲಿನ ಚಿಲಕವನ್ನು ಕಬ್ಬಿಣದ ರಾಡಿನಿಂದ ಮೀಟಿ ಮನೆಯ ಒಳಗೆ ಹೋಗಿ ಕಳ್ಳತನ ಮಾಡಿರುವುದನ್ನು ತೋರಿಸಿರುತ್ತಾರೆ. ಅವರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸಿರುತ್ತಾರೆ.

ದಿನಾಂಕ 05-08-2020 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಜಪ್ತು ಮಾಡಿದ್ದ 2 ಮೂಗುತಿಗಳನ್ನು ತೋರಿಸಿರುತ್ತಾರೆ. ನನ್ನ ಜೊತೆಯಲ್ಲಿ ನನ್ನ ತಾಯಿಯಾದ ಚಾಸಾ-6 ನ್ನು ಕರೆದುಕೊಂಡು ಹೋಗಿದ್ದು ಸದರಿ ಮೂಗುತಿಗಳು ನಮ್ಮವೇ ಆಗಿದ್ದವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಮಾಡಿರುವ 2 ಮೂಗುತಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ್ ಎಂ. ಭಂಡಾರಿಯವರಿಂದಃ**

ನಾನು ಬಿ.ಎಸ್.ಸಿ ಪದವಿಯನ್ನು ವ್ಯಾಸಂಗ ಮಾಡಿರುತ್ತೇನೆ. ನಿಪಿ-1 ನ್ನು ನಾನೇ ಬರೆದಿರುತ್ತೇನೆ. ಪಿರ್ಯಾದು ನೀಡಲು ನಾನು ದಿನಾಂಕ 17-07-2020 ರಂದು ಹೊನ್ನಾವರ ಪೋಲೀಸ್ ಠಾಣೆಗೆ ಹೋಗಿದ್ದೆ. ಚಾಸಾ-2 ನನ್ನ ಸಂಬಂಧಿಕ ಎಂದರೆ ಸರಿ. ಚಾಸಾ-2 ಮತ್ತು 3 ನ್ನು ಸ್ಥಳಕ್ಕೆ ನಾನೇ ಕರೆಸಿರುತ್ತೇನೆ. ನಾನು ಠಾಣೆಗೆ ಹೋದಾಗ ಆರೋಪಿತರ ಸ್ವಾದೀನದಿಂದ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ.

2 ನತ್ತುಗಳನ್ನು ಜಪ್ತು ಮಾಡಿಕೊಳ್ಳಲಾಗಿದೆ ಎಂದು ನಾನು ಪೋಲಿಸರಿಗೆ ಮರುಹೇಳಿಕೆ ನೀಡಿರುವುದಿಲ್ಲ. ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಪೋಲಿಸರು ನಮ್ಮ ಮನೆಯ ಬಳಿ ಕರೆತಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**